## ಕಾವ್ಯಾನಂದ ಅಂತರಜಾಲತಾಣದ ಸಂಪಾದಕರ ಕಿರು ಪರಿಚಯ

ಡಾ ಸಿದ್ದಯ್ಯ ಪುರಾಣಿಕ ಅವರ ಪುತ್ರ ಶ್ರೀ ಪ್ರಸನ್ನ ಕುಮಾರ ಪುರಾಣಿಕ ಮತ್ತು ಅವರ ಪತ್ನಿ ಶ್ರೀಮತಿ ಲತಾ ಪುರಾಣಿಕ ಅವರು ಕಳೆದ ಹತ್ತು ವರ್ಷಗಳಿಂದ ಶ್ರದ್ಧೆಯಿಂದ ಮತ್ತು ಸಮಗ್ರವಾಗಿ ಪುರಾಣಿಕರ ಸಾಹಿತ್ಯವನ್ನು, ಸಂಬಂಧಿತ ವಿಷಯಗಳನ್ನು ಸಂಗ್ರಹಿಸಿ ವಿವಿಧ ಶೀರ್ಷಿಕೆಗಳಲ್ಲಿ ವರ್ಗೀಕರಿಸಿ, ಅದನ್ನು ಅಂಕೀಕರಿಸಿ ಕನ್ನಡ ಗಣಕ ಪರಿಷತ್ತಿನ ಶ್ರೀ ನರಸಿಂಹಮೂರ್ತಿ ಅವರಿಗೆ ಸಿದ್ದಯ್ಯಪುರಾಣಿಕರ ಬಗೆಗೆ ಒಂದು ಅಂತರಜಾಲತಾಣವನ್ನು ಸಿದ್ಧಪಡಿಸಲು ಹಸ್ತಾಂತರಿಸಿದ್ದಾರೆ. ಡಾ.ಸಿದ್ದಯ್ಯ ಪುರಾಣಿಕ ಅವರ ಕೆಲವು ಕೃತಿಗಳನ್ನು ಹಿಂದಿ ಮತ್ತು ಇಂಗ್ಲಿಷ್‌ಗೆ ಅನುವಾದಿಸಲು ಅಯ್ಕೆ ಮಾಡಿದ್ದಾರೆ. ಹಿಂದಿ ಅನುವಾದವನ್ನು ಡಾ. ಟಿ.ಜಿ. ಪ್ರಭಾ ಶಂಕರ ಪ್ರೇಮಿ ಅವರು ಮಾಡಿದ್ದಾರೆ. ಕಳೆದ 5 ವರ್ಷಗಳಿಂದ ಮಂಡ್ಯದ ಚಿನ್ಮಯ ಮಿಷನ್ನಿನ ಸ್ವಾಮಿ ಆದಿತ್ಯಾನಂದರು ಪುರಾಣಿಕರ ಒಂದು ಸಾವಿರದ ಐದುನೂರು ವಚನಗಳನ್ನು ಪೂರ್ವಭಾವಿಯಾಗಿ ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಅದಕ್ಕಾಗಿ ಶ್ರೀ ಪ್ರಸನ್ನ ಕುಮಾರ ಪುರಾಣಿಕ ಮತ್ತು ಶ್ರೀಮತಿ ಲತಾ ಪುರಾಣಿಕ ಅವರು ಅವರಿಗೆ ಮನಃಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

ಪುರಾಣಿಕರ ಕೆಲವು ಪುಸ್ತಕಗಳು ಮರಾಠಿ, ಉರ್ದು, ತೆಲುಗು ಮತ್ತು ನೇಪಾಳಿ ಭಾಷೆಗಳಿಗೆ ಅನುವಾದವಾಗಿವೆ. ಇವನ್ನು ಇತರ ಭಾಷೆಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ನೀಡಿದೆ.

ಶ್ರೀ ಪ್ರಸನ್ನ ಅವರು ಹೆಚ್ ಎಂ ಟಿ ಸಂಸ್ಥೆಯಲ್ಲಿ ಜನರಲ್ ಮಾರ್ಕೆಟಿಂಗ್ ಮ್ಯಾನೇಜರ್ ಆಗಿದ್ದರು. ಅವರು ಕ್ರಿ.ಶ. 2000 ರಲ್ಲಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದರು. ಅನಂತರ ಅವರು ಕಳೆದ 25 ವರ್ಷಗಳಲ್ಲಿ ತಮ್ಮ ಪತ್ನಿ ಲತಾ ಅವರೊಂದಿಗೆ ತಮ್ಮ ಸಮಯವನ್ನು ತಮ್ಮ ತಂದೆಯ ಎಲ್ಲಾ ಪುಸ್ತಕಗಳನ್ನು ಸಮಗ್ರ ರೂಪದಲ್ಲಿ ತಮ್ಮ ಸ್ವಂತ ನಿಧಿಯಿಂದ ಮರುಪ್ರಕಟಿಸಲು ವ್ಯಯಿಸಿದ್ದಾರೆ. ಪುರಾಣಿಕ ಅವರ ಅಪಾರ ಸಾಹಿತ್ಯ ಸೃಜನೆಯನ್ನು ಸಾರ್ವಜನಿಕರಿಗೆ ಲಭ್ಯವಾಗಿಸುವ ಮೂಲಕ ಸದಾ ಜೀವಂತವಾಗಿಡಲು ಶ್ರೀ ಪ್ರಸನ್ನ ಕುಮಾರ ಪುರಾಣಿಕ ಮತ್ತು ಶ್ರೀಮತಿ ಲತಾ ಪುರಾಣಿಕ ಅವರು ಅಪಾರವಾಗಿ ಶ್ರಮಿಸಿದ್ದಾರೆ. ಇದರ ವಿವರಗಳನ್ನು ಪುರಾಣಿಕ ಅವರ ಆತ್ಮಚರಿತ್ರೆಯ ಪುಸ್ತಕ "ನನ್ನ ನಿನ್ನೆಯೊಡನೆ ಕಣ್ಣು ಮುಚ್ಚಾಲೆ" ಎಂಬ ಶೀರ್ಷಿಕೆಯಲ್ಲಿ ಸಂಪಾದಕ/ಪ್ರಕಾಶಕರ ಟಿಪ್ಪಣಿಯಲ್ಲಿ ದಾಖಲಿಸಿದೆ.

ಶ್ರೀ ಪ್ರಸನ್ನ ಅವರು 10-10-1948 ರಂದು ಜನಿಸಿದರು, ತಮ್ಮ ಶಾಲಾ ಶಿಕ್ಷಣವನ್ನು ಬೆಂಗಳೂರು ಮಿಲಿಟರಿ ಶಾಲೆಯಲ್ಲಿ ಮತ್ತು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಯನ ಮಾಡಿ 1970 ರಲ್ಲಿ ಎಂಜಿನಿಯರಿಂಗ್ ಮುಗಿಸಿದರು.. ಅವರು 24-11-1971 ರಂದು ಡಾ.ಯು.ವಿ. ಸುಳ್ಳದಮಠ ಮತ್ತು ಶ್ರೀಮತಿ ಶಾರದ ಸುಳ್ಳದಮಠ ಅವರ ಪುತ್ರಿ ಲತಾ ಅವರನ್ನು ವಿವಾಹವಾದರು. ಅವರಿಗೆ ಗಗನ ಮತ್ತು ಕವನ ಎಂಬ ಇಬ್ಬರು ಗಂಡು ಮಕ್ಕಳಿದ್ದಾರೆ, ಇಬ್ಬರೂ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮತ್ತು ಯು ಎಸ್‌ಎಯಲ್ಲಿ ನೆಲೆಸಿದ್ದಾರೆ. ಗಗನ ಶಿಲ್ಪಾ ಅವರನ್ನು ವಿವಾಹವಾಗಿದ್ದಾರೆ ಮತ್ತು ಅವರಿಗೆ ನಿಕಿತಾ ಮತ್ತು ಶ್ರಿಯಾ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕವನ ಗೌರಿ ಅವರನ್ನು ವಿವಾಹವಾಗಿದ್ದಾರೆ ಮತ್ತು ಅವರಿಗೆ ರೋಹನ ಎಂಬ ಮಗನಿದ್ದಾನೆ

ಕಾವ್ಯಾನಂದರ ಬಗೆಗಿನ ಅಂತರಜಾಲತಾಣಕ್ಕೆ ಬೇಕಾದ ಅಂತರಜಾಲ ಸ್ಥಳಾವಕಾಶ ಮತ್ತು ವಿಳಾಸಗಳಿಗೆ ಅಗತ್ಯವಾದ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಗಗನ ವಹಿಸಿಕೊಂಡಿದ್ದಾರೆ. ಗಗನ ಮತ್ತು ಕವನ ಇಬ್ಬರೂ ನಿರೂಪಿಸಿದ್ದಾರೆ